**B**

**CCE RR/PR/NSR/NSPR**
**Full Syllabus**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಆಗಸ್ಟ್ 2024 ರ ಪರೀಕ್ಷೆ - 3**

**AUGUST 2024 EXAMINATION - 3**

**ಮಾದರಿ ಉತ್ತರಗಳು**

**MODEL ANSWERS**

**ಸಂಕೇತ ಸಂಖ್ಯೆ : 01-K** **CODE NO. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / NSR / NSPR)**

**ದಿನಾಂಕ : 02. 08. 2024 ]** **[ ಗರಿಷ್ಠ ಅಂಕಗಳು : 100**

**Date : 02. 08. 2024 ]** **[ Max. Marks : 100**

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **6 × 1 = 6** |
| 1. | ಅನುನಾಸಿಕ ಸಂಧಿಗೆ ಉದಾಹರಣೆಯಿದು<br>(ಎ) ದೇವೇಂದ್ರ (ಬಿ) ಮಳೆಗಾಲ<br>(ಸಿ) ವಾಙ್ಮಯ (ಡಿ) ದಿಗಂತ<br>***ಉತ್ತರ :*** (ಸಿ) ವಾಙ್ಮಯ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ<br>(ಎ) ಅರ್ಧವಿರಾಮ ಚಿಹ್ನೆ (ಬಿ) ಉದ್ಧರಣ ಚಿಹ್ನೆ<br>(ಸಿ) ವಾಕ್ಯವೇಷ್ಠನ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ<br>***ಉತ್ತರ :*** (ಬಿ) ಉದ್ಧರಣ ಚಿಹ್ನೆ | |
| 3. | 'ಅಂಗೈ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ತತ್ಪುರುಷ ಸಮಾಸ (ಬಿ) ಕ್ರಿಯಾ ಸಮಾಸ<br>(ಸಿ) ದ್ವಿಗು ಸಮಾಸ (ಡಿ) ಅಂಶಿ ಸಮಾಸ<br>***ಉತ್ತರ :*** (ಡಿ) ಅಂಶಿ ಸಮಾಸ | |
| 4. | 'ಬೇಗನೆ' ಪದವು ಈ ಅವ್ಯಯಕ್ಕೆ ಸೇರಿದೆ<br>(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಅನುಕರಣಾವ್ಯಯ<br>(ಸಿ) ಕ್ರಿಯಾರ್ಥಕಾವ್ಯಯ (ಡಿ) ಭಾವಸೂಚಕಾವ್ಯಯ<br>***ಉತ್ತರ :*** (ಎ) ಸಾಮಾನ್ಯಾರ್ಥಕಾವ್ಯಯ | |
| 5. | 'ಸಾವಿತ್ರಿಯೊಳ್' ಈ ಪದದಲ್ಲಿರುವ ವಿಭಕ್ತಿ<br>(ಎ) ದ್ವಿತೀಯಾ (ಬಿ) ತೃತೀಯಾ<br>(ಸಿ) ಪಂಚಮೀ (ಡಿ) ಸಪ್ತಮೀ<br>***ಉತ್ತರ :*** (ಡಿ) ಸಪ್ತಮೀ | |
| 6. | ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ<br>(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ<br>(ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ<br>***ಉತ್ತರ :*** (ಸಿ) ಮಿಶ್ರವಾಕ್ಯ | |
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 7. | ಹುಳಹುಪ್ಪಡಿ : ಜೋಡುನುಡಿ :: ತುತ್ತತುದಿ : ............... .<br>***ಉತ್ತರ :*** ದ್ವಿರುಕ್ತಿ | |
| 8. | ನದಿ : ರೂಢನಾಮ :: ವಿಜ್ಞಾನಿ : ......................... .<br>***ಉತ್ತರ :*** ಅನ್ವರ್ಥನಾಮ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | ವೈಶಾಖ : ಬೇಸಗೆ :: ಕುಠಾರ : ........................ .<br>***ಉತ್ತರ :*** ಕೊಡಲಿ | |
| 10. | ಮಾಡಲಿ : ವಿಧ್ಯರ್ಥಕ :: ಮಾಡಿಯಾನು : ........................ .<br>***ಉತ್ತರ :*** ಸಂಭಾವನಾರ್ಥಕ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.**<br>**(ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **7 × 1 = 7** |
| 11. | ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು ?<br>***ಉತ್ತರ :***<br>ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರು 'ವೂಲವರ್ಥ'. | |
| 12. | ಶಿವಚರಿತ್ರೆಯಲ್ಲಿ ಶಿವಾಜಿ ಮಹಾರಾಜರನ್ನು ಯಾರ ಅವತಾರವೆಂದು ಹೇಳಲಾಗಿದೆ ?<br>***ಉತ್ತರ :***<br>ಶಿವಚರಿತ್ರೆಯಲ್ಲಿ ಶಿವಾಜಿ ಮಹಾರಾಜರನ್ನು ಶ್ರೀಶಂಕರರ ಅವತಾರವೆಂದು ಹೇಳಲಾಗಿದೆ. | |
| 13. | ಆಚಾರವು ಯಾವುದಕ್ಕೆ ಸಂಬಂಧಿಸಿದೆ ?<br>***ಉತ್ತರ :***<br>ಆಚಾರವು ಮಾನವರ ಒಳಗಣ ಶಿಸ್ತಿಗೆ ಸಂಬಂಧಿಸಿದೆ. | |
| 14. | ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?<br>***ಉತ್ತರ :***<br>ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವಗುರು, ದ್ವಿಜರ ಪೂಜೆಯನ್ನು ಮಾಡುತ್ತ ಕಳೆದನು. | |
| 15. | ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?<br>***ಉತ್ತರ :***<br>ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ. | |
| 16. | ದ್ರೋಣನು ಪರಶುರಾಮರ ಬಳಿಗೆ ಏಕೆ ಬಂದನು ?<br>***ಉತ್ತರ :***<br>ದ್ರೋಣನು ಪರಶುರಾಮರ ಬಳಿಗೆ ಸಂಪತ್ತನ್ನು ಬೇಡಲು ಬಂದನು. | |
| 17. | ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು ?<br>***ಉತ್ತರ :***<br>ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರು 'ದ್ರಾವಿಡ ಕಳಗಂ'. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| IV. | **ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು) :** | **10 × 2 = 20** |
| 18. | ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?<br>***ಉತ್ತರ :***<br>ಸೀತೆಯ ಅಗಲಿಕೆಯಿಂದ ಶೋಕತಪ್ತನಾದ ರಾಮನನ್ನು ಕುರಿತು ಲಕ್ಷ್ಮಣನು "ತಾಳಿಕೋ ಅಣ್ಣ ತಾಳಿಕೋ, ಅಖಿಲ ಲೋಕಕ್ಕೆ ತೇಜವನ್ನು ನೀಡುವ ಸೂರ್ಯನೇ ತನ್ನ ತೇಜವನ್ನು ಕಳೆದುಕೊಂಡರೆ ತೇಜವನ್ನು ನೀಡುವವರು ಯಾರು ? ರಾಮನೇ ಧೈರ್ಯವನ್ನು ಕಳೆದುಕೊಂಡರೆ ಅಖಿಲ ಲೋಕಕ್ಕೆ ಸ್ಥೈರ್ಯವನ್ನು ನೀಡುವವರು ಯಾರು? ಧೈರ್ಯವಾಗಿರು" ಎಂದು ಸಮಾಧಾನಪಡಿಸಿದನು. | |
| 19. | ರಾಜರ ಪ್ರಕೃತಿ ಹೇಗಿರುತ್ತದೆ ?<br>***ಉತ್ತರ :***<br>ರಾಜರಾದವರಿಗೆ ಸಹಜವಾಗಿ ಕಿವಿ ಕಿವುಡಾಗಿರುತ್ತದೆ. ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಇದಕ್ಕೆಲ್ಲ ಕಾರಣ ದುಡ್ಡಿನ ಮಹಿಮೆ ದುಡ್ಡು ದುರಭಿಮಾನದ ತವರು ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷ. ರಾಜ್ಯಾಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿ ಮಂಕಾಗಿ ಬಿಡುತ್ತದೆ. ಅನಾದರ ತುಂಬಿರುತ್ತದೆ. ಇದು ರಾಜರ ಪ್ರಕೃತಿಯಾಗಿದೆ. | |
| 20. | ಸಿರಿಯು ರಾಜರಿಗೆ ಒಲಿದರೆ ಆಗುವ ಅನಾಹುತಗಳಾವುವು ?<br>***ಉತ್ತರ :***<br>ಕೆಲವು ರಾಜರಿಗೆ ದೈವಯೋಗದಿಂದ ಸಿರಿಯು ಒಲಿಯುತ್ತದೆ. ಜಗತ್ತಿನ ಎಲ್ಲಾ ದೌರ್ಜನ್ಯಗಳು ಅವರಲ್ಲಿ ಕಂಡುಬರುತ್ತವೆ. ಅವರ ದಯೆ-ದಾಕ್ಷಿಣ್ಯಗಳನ್ನೆಲ್ಲ ತೊಳೆದು ಬಿಡುತ್ತದೆ. ಹೋಮದ ಹೊಗೆಯಿಂದ ಅವರ ಮನಸ್ಸು ಮಲಿನವಾಗುತ್ತದೆ. ದರ್ಭೆಯ ಚಿಗುರು ಅವರ ಕ್ಷಮಾಗುಣವನ್ನು ಒರೆಸಿ ಬಿಡುತ್ತದೆ. ಅವರಿಗೆ ಮುಪ್ಪಿನ ನೆನಪು ಮರೆಯಾಗುತ್ತದೆ. ಪರಲೋಕ ಕಾಣಿಸುವುದಿಲ್ಲ. ದಿಟವನ್ನೆ ನುಡಿಯುವ ಬುದ್ಧಿ ಗಾಳಿಯಲ್ಲಿ ತೇಲಿ ಹೋಗುತ್ತದೆ. ಸಜ್ಜನಿಕೆ ದೂರ ಸರಿಯುತ್ತದೆ. ನಲ್ನುಡಿ ಕೇಳುವ ಕಿವಿ ಕಿವುಡಾಗುತ್ತದೆ. ರಾಜರ ಯಶಸ್ಸನ್ನು ನಾಶಗೊಳಿಸುತ್ತದೆ. ಈ ರೀತಿಯಾಗಿ ಸಿರಿಯು ರಾಜರಿಗೆ ಒಲಿದರೆ ಅನಾಹುತಗಳಾಗುತ್ತವೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 21. | ಮೊಗ್ಗನ್ನು ಆದರ್ಶವಾಗಿ ಸ್ವೀಕರಿಸಲು ಇರುವ ತೊಡಕುಗಳೇನು ?<br>***ಉತ್ತರ :***<br>ಪೂರ್ತಿಯಾಗಿ ಅರಳದ ಮೊಗ್ಗುಗಳ ಬದಲು ಪೂರ್ಣ ಅರಳಿದ ಪುಷ್ಪಗಳು ನಮ್ಮ ಆದರ್ಶವಾಗಬೇಕು. ಏಕೆಂದರೆ ಅರೆಬಿರಿದ ಮೊಗ್ಗುಗಳಲ್ಲಿ ಅಕಸ್ಮಾತ್ ಕ್ರಿಮಿಕೀಟಗಳು ಸೇರಿದರೆ ಮುಂದೆ ಅವು ಪೂರ್ಣವಿಕಸಿತವಾಗಲಾರವು. ಯಾವ ಪುಷ್ಪವು ಪೂರ್ತಿಯಾಗಿ ಅರಳಿರುತ್ತದೆಯೋ ಅದು ಶುದ್ಧವಾಗಿ ಕ್ರಿಮಿರಹಿತವಾಗಿರುತ್ತದೆ. | |
| 22. | ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕೆಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ ?<br>***ಉತ್ತರ :***<br>ಜಗತ್ತಿನಲ್ಲಿರುವ ಹಿಂದೂ, ಮುಸ್ಲಿಂ, ಜೈನ, ಬೌದ್ಧ, ಕ್ರೈಸ್ತ ಮೊದಲಾದ ಎಲ್ಲಾ ಮತಗಳು ಮತ್ತು ಧರ್ಮ ಗ್ರಂಥಗಳು ಮನುಷ್ಯನ ಜೀವನಕ್ಕೆ ದಾರಿ ತೋರುವ ಮಾರ್ಗದರ್ಶಕಗಳು ಎಂದು ತಿಳಿಯಬೇಕು. ಎಲ್ಲಾ ಧರ್ಮದವರು ಸಾಮರಸ್ಯದಿಂದ ಬದುಕಬೇಕು. ಭಯ-ಸಂಶಯಗಳಿಂದ ಮಸುಕಾದ ಕಣ್ಣುಗಳಿಗೆ ಶಾಂತಿ, ಸಮೃದ್ಧಿಯ ಧರ್ಮ ಸಾಮರಸ್ಯದ ಮಂತ್ರವನ್ನು ಪಠಿಸಬೇಕು. ಉಜ್ವಲ ಭವಿಷ್ಯ ರೂಪಿಸುವ ಕನಸು ಕಾಣುತ್ತಾ ನಾವು ಬದುಕಬೇಕೆಂಬುದು ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವಾಗಿದೆ. | |
| 23. | ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳಾವುವು ?<br>***ಉತ್ತರ :***<br>ಸಭಾಮಂಟಪವನ್ನು ಪ್ರವೇಶಿಸಿದ ದ್ರೋಣನು ದ್ರುಪದನನ್ನು ಕುರಿತು "ನಾನು ಯಾರೆಂಬುದು ತಿಳಿದಿಲ್ಲವೆ ?" ಎಂದು ಪ್ರಶ್ನಿಸಿದಾಗ ದ್ರುಪದನು ಗರ್ವದಿಂದ "ನಿನ್ನನ್ನು ನಾನು ತಿಳಿಯೆನು. ನನ್ನನ್ನು ನೀನು ಎಲ್ಲಿ ಕಂಡಿದ್ದೀಯೋ? ರಾಜನಿಗೆ ಮತ್ತು ಬ್ರಾಹ್ಮಣನಿಗೆ ಎಲ್ಲಿಯ ಗೆಳೆತನ? ಮನುಷ್ಯರು ಇಷ್ಟೊಂದು ನಾಚಿಕೆಯಿಲ್ಲದವರಾಗಿರುತ್ತಾರೆಯೇ ?" ಎಂದು ದ್ರೋಣರಿಗೆ ತುಂಬಾ ಮರ್ಮಾಘಾತವಾಗುವಂತೆ ಹೀಯಾಳಿಸಿ ನುಡಿದನು. | |
| 24. | ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವನ್ನು ತಿಳಿಸಿ.<br>***ಉತ್ತರ :***<br>ಗಾಂಧೀಜಿಯವರಿಗೆ ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ ಶಿಕ್ಷಣದ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಆವಶ್ಯಕ ಅಂಶವಲ್ಲವೆಂಬ ಭಾವನೆಯು ಇಂಗ್ಲೆಂಡಿಗೆ ಹೋಗುವವರೆಗೂ ಇತ್ತು. ದಕ್ಷಿಣ ಆಫ್ರಿಕಾಕ್ಕೆ ಹೋದಾಗ ಅಲ್ಲಿನ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರೆವಣಿಗೆ ನೋಡಿ ಪಶ್ಚಾತ್ತಾಪ ಪಟ್ಟುಕೊಂಡು, ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆಯೆಂಬುದನ್ನು ಅರಿತರು. ತಮ್ಮ ಬರೆವಣಿಗೆಯನ್ನು ತಿದ್ದಿಕೊಳ್ಳಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಆದ್ದರಿಂದ ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶ ಎಂಬುದನ್ನು ಪ್ರತಿಯೊಬ್ಬ ಯುವಕ-ಯುವತಿಯರು ತಿಳಿದುಕೊಳ್ಳಬೇಕೆಂದು ಹೇಳಿದರು. | |
| 25. | ಭಗತ್‌ಸಿಂಗ್ ವೀರಯೋಧನಾಗಿ ಅಮರನಾದುದು ಹೇಗೆ ? | |
| | ***ಉತ್ತರ :*** | |
| | ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ಮರಣ ದಂಡನೆಗೆ ಈಡಾಗಿ ತನ್ನ ಸಹಚರರಾದ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತರೊಂದಿಗೆ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾದನು. | |
| 26. | 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ? | |
| | ***ಉತ್ತರ :*** | |
| | ಒಡೆಯನ ಅಂಗಳದಲ್ಲಿದ್ದ ಮಾವಿನ ಮರಗಳು ಮೈತುಂಬಿ ನಿಂತಿವೆ. ಆಕಾಶದಲ್ಲಿ ಹಕ್ಕಿಗಳು ರೆಕ್ಕೆಬಿಚ್ಚಿ ಸ್ವಚ್ಛಂದವಾಗಿ ಹಾರಾಡುತ್ತಿವೆ. ಕೋಗಿಲೆಗಳು ಮನದುಂಬಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ವಸಂತನ ಆಗಮನದ ಹಿನ್ನೆಲೆಯಲ್ಲಿ ಇಳೆಯು ಸಂಭ್ರಮಿಸುತ್ತಿದೆ. ಹೀಗೆ 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ. | |
| 27. | ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಇಂದು ಮರುಗಲು ಕಾರಣವೇನು ? | |
| | ***ಉತ್ತರ :*** | |
| | ಈಗ ಹಬ್ಬ ಅಂದರೆ ಖರೀದಿ, ಬಟ್ಟೆಗಳು ಬೇಕು, ಮನೆಗೆ ಫ್ರಿಜ್, ಹೊಸ ಟಿವಿ, ವಾಹನ ಹೀಗೆ ಒಂದಿಲ್ಲೊಂದು ವಸ್ತುಗಳು ಬೇಕು. ಹಬ್ಬ ಅಂದರೆ ಮಾರುಕಟ್ಟೆ ಜನಸಂದಣಿ, ಹಣದ ಖರ್ಚು. ಬಟ್ಟೆ, ಪಟಾಕಿ, ಅಲಂಕಾರಿಕ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವಸ್ತುಗಳು ನಮ್ಮ ಮನಸ್ಸನ್ನು ಸೆಳೆಯುತ್ತವೆ. ಸರಳ ಬದುಕು ಆದರ್ಶವಾಗಿದ್ದ ನೆಲದಲ್ಲಿ ಆಡಂಬರ, ರಂಗು, ನಾಟಕೀಯತೆ ಸೇರಿಕೊಂಡು ಬದುಕು ಲಗಾಮಿಲ್ಲದ ಓಟ ಕಿತ್ತಿದೆ. ಸಂಪ್ರದಾಯ, ದೇವರ ನಂಬಿಕೆಗಳಿಗಿಂತ ಹಬ್ಬಗಳು ಖರೀದಿಯ ಸವಾಲು ಒಡ್ಡಿ ಮನೆಮನಗಳನ್ನು ಕಾಡುತ್ತಿವೆ. ಆಚರಣೆಯ ಶ್ರದ್ಧೆ ಮರೆಯಾಗಿ ಖರೀದಿ ವಿಜೃಂಭಿಸಿದೆ! ರಾತ್ರಿ ಹಗಲಾಗಿಸುವ ವಿದ್ಯುತ್ ದೀಪಾಲಂಕಾರದಲ್ಲಿ ಪರದೇಶಿ ಚೈನಾ ಬಲ್ಬ್ ಮೆರೆದಿದೆ! ಹೀಗಾಗಿ ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಇಂದು ಮರುಗಿವೆ. | |
| **V.** | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | *ಪು.ತಿ. ನರಸಿಂಹಾಚಾರ್ :*<br>***ಉತ್ತರ :***<br>ಕನ್ನಡ ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಇವರು ಸಾ.ಶ. ೧೯೦೫ ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. 'ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ' ಇವರ ಪ್ರಮುಖ ಕೃತಿಗಳಾಗಿವೆ. ಶ್ರೀಯುತರ 'ಹಂಸದಮಯಂತಿ ಮತ್ತು ಇತರ ರೂಪಕಗಳು' ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಶ್ರೀಹರಿಚರಿತೆ' ಕಾವ್ಯಕ್ಕೆ ಪಂಪಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 29. | *ರನ್ನ :*<br>***ಉತ್ತರ :***<br>ಕನ್ನಡದ ಕವಿ ರತ್ನತ್ರಯರಲ್ಲಿ ಒಬ್ಬನಾದ ರನ್ನ ಮಹಾಕವಿಯು ಸಾ.ಶ. ಸುಮಾರು ೯೪೯ (ಹತ್ತನೆಯ ಶತಮಾನ) ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಈತನ ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ. ಚಾಲುಕ್ಯರ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು. ಇವನು 'ಸಾಹಸ ಭೀಮ ವಿಜಯಂ (ಗದಾಯುದ್ಧ)', 'ಅಜಿತತೀರ್ಥಂಕರ ಪುರಾಣತಿಲಕಂ', 'ಪರಶುರಾಮಚರಿತಂ', 'ಚಕ್ರೇಶ್ವರಚರಿತಂ' ಎಂಬ ಕಾವ್ಯಗಳನ್ನು ಬರೆದಿದ್ದಾನೆ. 'ರನ್ನಕಂದ' ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಈತನಿಗೆ ತೈಲಪನು 'ಕವಿಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾನೆ. | |
| **VI.** | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | **1 × 3 = 3** |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |
| 30. | ಆ ರವಮಂ ನಿರ್ಜಿತಕಂ<br>ಶೀರವರವಮಂ ನಿರಸ್ತ ಘನರವಮಂ ಕೋ<br>— U U \| — — \| U U —<br>ಆ ರವ\|ಮಂ ನಿ\|ರ್ಜಿತಕಂ\| = ೧೨ ಮಾತ್ರೆಗಳು<br>— U U \| U U — \| U — U \| U U U U \| — —<br>ಶೀರವ\|ರವಮಂ\|ನಿರಸ್ತ\|ಘನರವ\|ಮಂ ಕೋ\| = ೨೦ ಮಾತ್ರೆಗಳು<br>ಛಂದಸ್ಸು : ಇದು ಮಾತ್ರಾಗಣಾಧಾರಿತ 'ಕಂದಪದ್ಯ'ದ ಲಕ್ಷ್ಯವಾಗಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **VII.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ."<br>***ಉತ್ತರ :***<br>ಅಲಂಕಾರದ ಹೆಸರು : ಉಪಮಾಲಂಕಾರ<br>ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.<br>*ಸಮನ್ವಯ :* *ಉಪಮೇಯ :* ಮಗುವಿನ ಮುಖ<br>*ಉಪಮಾನ :* ಚಂದ್ರ<br>*ಉಪಮಾವಾಚಕ :* ಅಂತೆ<br>*ಸಮಾನಧರ್ಮ :* ಮನೋಹರವಾಗಿರುವುದು<br>ಇಲ್ಲಿ ಉಪಮೇಯವಾದ 'ಮಗುವಿನ ಮುಖವನ್ನು' ಉಪಮಾನವಾದ 'ಚಂದ್ರನಿಗೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ಮನೋಹರವಾಗಿರುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರ (ಪೂರ್ಣೋಪಮಾಲಂಕಾರ)ದ ಲಕ್ಷ್ಯವಾಗಿದೆ. | |
| **VIII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ತಾಳಿದವನು ಬಾಳಿಯಾನು.<br>**ಅಥವಾ**<br>ಹಾಸಿಗೆ ಇದ್ದಷ್ಟು ಕಾಲು ಚಾಚು. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IX. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **6 × 3 = 18** |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಹೊತ್ತು! ಹೊತ್ತು! ಹೊತ್ತೇ ಹಣ."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ವಿ.ಕೃ. ಗೋಕಾಕ ಅವರು ರಚಿಸಿರುವ 'ಸಮುದ್ರದಾಚೆಯಿಂದ' ಪ್ರವಾಸ ಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಲೇಖಕರು ತಮ್ಮ ಲಂಡನ್ ನಗರದ ಪ್ರವಾಸದ ಅನುಭವಗಳನ್ನು ದಾಖಲಿಸುತ್ತಾ ಲಂಡನ್ನಿನ ಬೀದಿಯಲ್ಲಿ ಲಕ್ಷಾನುಲಕ್ಷ ಜನರು ಅವಸರದಿಂದ ಓಡುತ್ತಾರೆ. ವಿದೇಶಗಳಲ್ಲಿ ಜನರು ಸಮಯವನ್ನು ವ್ಯರ್ಥ ಮಾಡದೆ ಅದರ ಸದ್ವಿನಿಯೋಗ ಮಾಡಿಕೊಳ್ಳುತ್ತಾ ದುಡಿದು ಹಣ ಗಳಿಸುತ್ತಾರೆ. ಇದು ಅಕ್ಷರಶಃ ವಿಲಾಯಿತಿಯಲ್ಲಿ ನಿಜವಾಗಿದೆ ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುವರು.<br>***ಸ್ವಾರಸ್ಯ :*** ಲಂಡನ್ ವಾಣಿಜ್ಯ ನಗರವಾಗಿದ್ದು, ಹಣ ಸಂಪಾದನೆಯೇ ಮುಖ್ಯ ಗುರಿಯಾಗಿದೆ ಇಲ್ಲಿ ಹಣದಷ್ಟೇ ಪ್ರಾಶಸ್ತ್ಯವನ್ನು ಸಮಯಕ್ಕೆ ನೀಡುತ್ತಾರೆ. ಸಮಯವು ಬಹಳ ಅಮೂಲ್ಯವಾದುದು ವಿದೇಶಗಳಲ್ಲಿ ಜನರು ಸಮಯವನ್ನು ವ್ಯರ್ಥಮಾಡದೆ ಕಾರ್ಯಪ್ರವೃತ್ತರಾಗಿರುವುದು ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 34. | "ಪುರುಷಾರ್ಥಗಳ ಸಾಧನೆಗೆ ಸ್ವಧರ್ಮಾಚರಣೆ ಅತ್ಯಾವಶ್ಯಕ."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಶತಾವಧಾನಿ ಡಾ. ಆರ್. ಗಣೇಶ್‌ರವರು ಬರೆದಿರುವ 'ಶ್ರೇಷ್ಠ ಭಾರತೀಯ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಚಿಂತನೆಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಯಾವುದೇ ವ್ಯಕ್ತಿಯು ತನ್ನ ಸ್ವಭಾವಕ್ಕೆ ಅನುಸಾರವಾಗಿ ತನ್ನದಾದ ಬದುಕನ್ನು ರೂಪಿಸಿಕೊಳ್ಳುವ ಮೂಲಕ ತಾನೂ ತನ್ನ ಸುತ್ತಮುತ್ತಲಿನ ಜಗತ್ತು ಹೆಚ್ಚಿನ ನೆಮ್ಮದಿಯನ್ನು ಗಳಿಸುವ ಪರಿಯೇ ಸ್ವಧರ್ಮ ಹಿಂದೆ ಹುಟ್ಟು ಮತ್ತು ಪರಿಸರಗಳಿಂದಲೇ ಮಾನವರ ಸ್ವಧರ್ಮಗಳು ರೂಪಿತವಾಗುತ್ತಿದ್ದವು. ಆದರೆ ಇಂದು ಹುಟ್ಟು ಮತ್ತು ಪರಿಸರಗಳ ಮೂಲಕವೇ ಸ್ವಧರ್ಮವನ್ನು ವ್ಯಕ್ತಿಯೊಬ್ಬ ಗುರುತಿಸಿಕೊಳ್ಳುವುದು ಸಾಧ್ಯವಿಲ್ಲ. ಅದು ಸಾಧ್ಯವೂ ಅಲ್ಲ ಎಂಬುದನ್ನು ಹೇಳುವಾಗ ಲೇಖಕರು ಈ ಮೇಲಿನ ಮಾತನ್ನು ಹೇಳುವರು. | |
| | ***ಸ್ವಾರಸ್ಯ :*** ತನ್ನೊಳಗಿನ ಒಲವು-ನಿಲುವುಗಳಿಂದಲೇ ಸ್ವಧರ್ಮವನ್ನು ಗುರುತಿಸಿಕೊಳ್ಳುವ ಅನಿವಾರ್ಯತೆ ಇದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳ ಮೂಲಕ ಸ್ವಧರ್ಮವನ್ನು ರೂಪಿಸಿಕೊಳ್ಳಬೇಕೆಂದು ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 35. | ''ವೃಕ್ಷಂ ಸಾಕ್ಷಿಯೆಂದು ಮುನ್ನಂ ಪೇೞ್ದುರುಂ ಕೇಳ್ದರುಮಿಲ್ಲಮ್.'' | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ದುರ್ಗಸಿಂಹ ಕವಿ ರಚಿಸಿರುವ 'ಕರ್ಣಾಟಕ ಪಂಚತಂತ್ರಂ' ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊನ್ನಿನ ಕಳ್ಳತನದ ಆರೋಪವನ್ನು ಮಾಡಿ, ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ಧರ್ಮಾಧಿಕರಣರ ಬಳಿಗೆ ಬರುವರು. ತಮ್ಮ ವೃತ್ತಾಂತವನ್ನು ಅವರಿಗೆ ತಿಳಿಸುತ್ತಾ ನಾವು ಹೊನ್ನನ್ನು ಬಚ್ಚಿಡುವಾಗ ಬೇರೆ ಯಾವ ಮನುಷ್ಯರು ಅಲ್ಲಿರಲಿಲ್ಲ. ಧರ್ಮಬುದ್ಧಿಯೇ ಹೊನ್ನನ್ನೆಲ್ಲ ಕದ್ದಿರುವುದಕ್ಕೆ ಅಲ್ಲಿರುವ 'ವಟವೃಕ್ಷ'ವೇ ಸಾಕ್ಷಿ ಎಂದು ಹೇಳುತ್ತಾನೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಇದನ್ನು ಕೇಳಿ ಧರ್ಮಾಧಿಕರಣರು ಆಶ್ಚರ್ಯಗೊಂಡು ಈ ಸಾಕ್ಷಿಯ ಬಗ್ಗೆ ಧರ್ಮಬುದ್ಧಿಗೆ ಕೇಳಿದಾಗ ಈ ಮೇಲಿನಂತೆ ಹೇಳುವನು. | |
| | ***ಸ್ವಾರಸ್ಯ :*** ಅಸಾಧ್ಯವಾದುದನ್ನು ಸಾಧಿಸಲು ಹೊರಟಿರುವ ದುಷ್ಟಬುದ್ಧಿಯ ತಂತ್ರ ಫಲಸದು ಎಂದು ಅರಿತ ಧರ್ಮಬುದ್ಧಿ ವೃಕ್ಷ ಸಾಕ್ಷಿ ನುಡಿಯುವುದಾದರೆ ಅದು ಸತ್ಯದ ಪರವಾಗಿರುವುದೆಂದು ಭಾವಿಸಿ ಮರವನ್ನು ಸಾಕ್ಷಿಯೆಂದು ಸ್ವೀಕರಿಸುವುದು ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 36. | "ಪ್ರೀತಿಯ ಹಣತೆಯ ಹಚ್ಚೋಣ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಜಿ.ಎಸ್. ಶಿವರುದ್ರಪ್ಪನವರು ರಚಿಸಿರುವ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು. ನಮ್ಮ ಸುತ್ತಲು ಆವರಿಸಿರುವ ಅಜ್ಞಾನ, ದ್ವೇಷ, ಅಸೂಯೆ, ಮೂಢನಂಬಿಕೆಗಳೆಂಬ ಕತ್ತಲನ್ನು ಹೊಡೆದೋಡಿಸಲು ಪ್ರೀತಿಯೆಂಬ ದೀಪವನ್ನು ಬೆಳಗಿಸುವ ಸಂಕಲ್ಪ ಮಾಡೋಣ ಎಂದು ಕವಿ ಹೇಳುವ ಸಂದರ್ಭವಾಗಿದೆ. | |
| | ***ಸ್ವಾರಸ್ಯ :*** ಜೀವನದಲ್ಲಿ ಧನಾತ್ಮಕ ಭಾವನೆ, ದೃಢಸಂಕಲ್ಪ ಹೊಂದಿದಾಗ ಸಮಾಜವನ್ನು ಸ್ವಾಸ್ಥ್ಯದ ನೆಲೆಯಾಗಿಸಬಹುದು. ಪ್ರೀತಿಯಿಂದ, ದ್ವೇಷವನ್ನು ಗೆಲ್ಲಬಹುದು. ಈ ಮೂಲಕ ದ್ವೇಷರಹಿತ ಸಮಾಜ ನಿರ್ಮಾಣ ಸಾಧ್ಯ ಎಂಬುದು ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 37. | "ರೆಕ್ಕೆಯ ಬೀಸುತ ಚೇತನಗೊಳಿಸಿ" | |
| | ***ಉತ್ತರ :*** | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಆಯ್ಕೆ :** ಪ್ರಸ್ತುತ ವಾಕ್ಯವನ್ನು 'ದ.ರಾ. ಬೇಂದ್ರೆ'ಯವರು ರಚಿಸಿರುವ 'ಗರಿ' ಕವನಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | **ಸಂದರ್ಭ :** ಕವಿ ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಕಾಲಪಕ್ಷಿಯ ಯುಗಯುಗಗಳ ಆಗು ಹೋಗುಗಳನ್ನು ಹಿಂದಕ್ಕೆ ತಳ್ಳುತ್ತಾ ಹೊಸ ಮನ್ವಂತರಗಳ ಪರಿವರ್ತನೆಗೆ, ಪ್ರಗತಿಗೆ ಕಾರಣವಾಗಿದೆ. ಅದು ತನ್ನ ಹಗಲು-ರಾತ್ರಿಗಳೆಂಬ ರೆಕ್ಕೆಗಳನ್ನು ಬೀಸುತ್ತ ಭೂಮಿಯ ಮೇಲಿನ ಜೀವರಾಶಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ ಉತ್ತಮ ಭವಿಷ್ಯಕ್ಕೆ ಶುಭ ಹಾರೈಸುತ್ತದೆ ಎಂದು ಕವಿ ಹೇಳುವ ಸಂದರ್ಭವಾಗಿದೆ. | |
| | **ಸ್ವಾರಸ್ಯ :** 'ಪರಿವರ್ತನೆಯೇ ಜಗದ ನಿಯಮ' ಎಂಬಂತೆ ಯುಗ ಯುಗಗಳು ಕಳೆದರೂ ಮುಂದಿನ ಪೀಳಿಗೆಗೆ ಚೈತನ್ಯವನ್ನು ತುಂಬಿ, ಉತ್ತಮ ಭವಿಷ್ಯಕ್ಕೆ ಕಾಲಪಕ್ಷಿಯು ಶುಭವನ್ನು ಹಾರೈಸುತ್ತಿರುವುದು ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 38. | "ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ" | |
| | **ಉತ್ತರ :** | |
| | **ಆಯ್ಕೆ :** ಪ್ರಸುತ್ತ ವಾಕ್ಯವನ್ನು ಡಾ. ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | **ಸಂದರ್ಭ :** ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ನಿಶ್ಶಸ್ತ್ರೀಕರಣ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕಾಯ್ದೆಯನ್ನು ಜಾರಿಗೆ ತಂದರು. ಈ ಕಾಯ್ದೆಯನ್ನು ವಿರೋಧಿಸಿ ಹಲಗಲಿ ಬೇಡರು ಕುಂಪಣಿ ಸರ್ಕಾರದ ವಿರುದ್ಧ ದಂಗೆ ಎದ್ದು ಕಾರಕೂನನ ಕಪಾಳಕ್ಕೆ ಬಡಿದರು. ಈ ವಿಷಯ ಸಾಹೇಬನಿಗೆ ಮುಟ್ಟಿ ಅವನು ಕೋಪಗೊಂಡು ಅಶ್ವದಳ ಸೈನ್ಯಕ್ಕೆ ಹಲಗಲಿಯ ಮೇಲೆ ದಾಳಿ ಮಾಡಲು ಹುಕುಮನ್ನು ಕೊಡುವನು. ಆಗ ಅಶ್ವದಳ ಸೈನ್ಯ ಹಲಗಲಿಯ ಮೇಲೆ ದಾಳಿ ಮಾಡಿತು. ಒಳಗಡೆ ಇದ್ದ ಹಲಗಲಿಯ ಬೇಡರು ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಬ್ರಿಟಿಷ್ ಸೈನ್ಯದ ಮೇಲೆ ಗುಂಡನ್ನು ಹಾರಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲಾವಣಿಕಾರ ಈ ಮಾತನ್ನು ಹೇಳಿದ್ದಾನೆ. | |
| | **ಸ್ವಾರಸ್ಯ :** ಸ್ವಾತಂತ್ರ್ಯ ಪ್ರಿಯರಾಗಿದ್ದ ಹಲಗಲಿಯ ಬೇಡರು ಶಕ್ತಿಶಾಲಿಯಾದ ಸೇನೆಯೊಂದಿಗೆ ಬ್ರಿಟಿಷರು ದಾಳಿ ಮಾಡಿದರೂ ಎದೆಗುಂದದೆ ಅವರನ್ನು ಧೈರ್ಯ ಹಾಗೂ ಸ್ವಾಭಿಮಾನದಿಂದ ಎದುರಿಸಿ ಅವರ ದಬ್ಬಾಳಿಕೆ, ದೌರ್ಜನ್ಯವನ್ನು ಮೆಟ್ಟಿ ನಿಲ್ಲಲು ಪ್ರಯತ್ನಿಸುವ ಗುಣ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| **X.** | **ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :** | **1 × 4 = 4** |
| 39. | ಹಸುರಾಗಸ; ..................................................<br>..................................................<br>..................................................<br>.................................................. ಬಿಸಿಲೂ! | |
| | **ಅಥವಾ** | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೊಸ ಹೂವಿನ ..................................................<br>....................................................................<br>....................................................................<br>....................................................... ಯುಸಿರೂ!<br>***ಉತ್ತರ :***<br>ಹಸುರಾಗಸ; ಹಸುರು ಮುಗಿಲು;<br>ಹಸುರು ಗದ್ದೆಯಾ ಬಯಲು;<br>ಹಸುರಿನ ಮಲೆ; ಹಸುರು ಕಣಿವೆ;<br>ಹಸುರು ಸಂಜೆಯೀ ಬಿಸಿಲೂ!<br>**ಅಥವಾ**<br>ಹೊಸ ಹೂವಿನ ಕಂಪು ಹಸರು,<br>ಎಲರಿನ ತಂಪೂ ಹಸುರು!<br>ಹಕ್ಕಿಯ ಕೊರಲಿಂಪು ಹಸುರು!<br>ಹಸುರು ಹಸುರಿಳೆಯುಸಿರೂ! | |
| **XI.** | **ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | **1 × 4 = 4** |
| | ವಿಷಯಾಂಶಕ್ಕೆ<br>ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ<br>ಒಟ್ಟು | 3 ಅಂಕಗಳು<br>1 ಅಂಕ<br>4 ಅಂಕಗಳು |
| 40. | ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।<br>ನೊರ್ವನೇ ವೀರನಾತನ ಯಜ್ಞತುರಗಮಿದು ।<br>ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥<br>ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।<br>ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।<br>ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥<br>***ಉತ್ತರ :***<br>ಪ್ರಸ್ತುತ ಪದ್ಯಭಾಗವನ್ನು ಲಕ್ಷ್ಮೀಶ ಕವಿ ರಚಿಸಿರುವ ‘ವೀರಲವ’ ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಶ್ರೀರಾಮನು ಸೀತೆಯ ಅಗಲುವಿಕೆಯಿಂದ ಮಾನಸಿಕವಾಗಿ ದುಃಖಕ್ಕೀಡಾಗಿ ರಾವಣನ ವಧೆಯಿಂದ ಬ್ರಹ್ಮಹತ್ಯಾದೋಷವನ್ನು ಪರಿಹರಿಸಿಕೊಳ್ಳಲು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಳ್ಳುತ್ತಾನೆ. ಈ ಅಶ್ವಮೇಧಯಾಗದ ಕುದುರೆ ದೇಶದೇಶಗಳಲ್ಲಿ ಸುತ್ತಾಡಿ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ಬರುತ್ತದೆ. ಅಲ್ಲಿ ತನ್ನ ಸಹಪಾಠಿಗಳೊಂದಿಗೆ ಆಟವಾಡುತ್ತಿದ್ದ ಲವನು ಕುದುರೆಯ ಬಳಿಗೆ ಬಂದು ಅದರ ಹಣೆಯ ಪಟ್ಟದಲ್ಲಿದ್ದ "ಇಡೀ ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ಶ್ರೀರಾಮನೊಬ್ಬನೇ ವೀರನು. ಇದು ಆತನ ಯಜ್ಞದ ಕುದುರೆ, ಇದನ್ನು ನಿರ್ವಹಿಸುವವರು ಯಾರಾದರೂ ಇದ್ದರೆ ತಡೆಯಲಿ" ಎಂದಿದ್ದ ಪಟ್ಟದ ಲೇಖನವನ್ನು ಓದಿ ಶ್ರೀರಾಮನ ಗರ್ವವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲ ಜನರು ಬಂಜೆ ಎಂದು ಕರೆಯುವುದಿಲ್ಲವೇ? ತನಗೆ ತೋಳುಗಳಿರುವುದು ಏತಕೆ ಎಂದು ಪ್ರತಿಜ್ಞೆಗೈದು ಲವನು ಕೋಪಗೊಂಡು ಕುದುರೆಯನ್ನು ತನ್ನ ಉತ್ತರೀಯದಿಂದ ಕಟ್ಟಿ ಹಾಕುತ್ತಾನೆ.<br><br>ಲವ ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಆತನಲ್ಲಿದ್ದ ಸಹಜ ಕ್ಷಾತ್ರಗುಣ, ವೀರತನ, ಮಾತೃಪ್ರೇಮ, ಸವಾಲುಗಳು, ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲ್ಯ ಸಹಜ ಸಾಹಸ ಪ್ರವೃತ್ತಿ ಹಾಗೂ ತಾಯಿಯ ಮೇಲಿನ ಗೌರವ ಅಭಿಮಾನ ಇಲ್ಲಿ ಕಂಡುಬರುವ ಉತ್ತಮ ಮೌಲ್ಯಗಳಾಗಿವೆ. | |
| **XII.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **2 × 4 = 8** |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 41. | ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾದ ಬಗೆಯನ್ನು ತಿಳಿಸಿ.<br><br>**ಅಥವಾ**<br><br>ವಿಶ್ವೇಶ್ವರಯ್ಯ ಅವರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಕ್ರಾಂತಿಕಾರಿ ಬದಲಾವಣೆಗಳನ್ನು ಕುರಿತು ಬರೆಯಿರಿ.<br><br>***ಉತ್ತರ :*** | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೨ ರ ಆಗಸ್ಟ್ ೮ ನೇ ತಾರೀಖಿನಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡರು. ದಿವಾನರಾಗಿದ್ದ ಸರ್ ಕೆ. ಶೇಷಾದ್ರಿ ಅಯ್ಯರ್‌ರವರ ಸಹಕಾರದಿಂದ ಮೈಸೂರು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ಅರಸು ಮನೆತನದಿಂದ ಬಂದವರಾಗಿದ್ದರೂ ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯ ಪರವಾಗಿದ್ದರು. ಇವರ ಕಾಲದಲ್ಲಿ 'ಪ್ರಜಾಪ್ರತಿನಿಧಿ ಸಭೆ' ಹೊಸ ರೂಪವನ್ನು ಪಡೆದು ಜನಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. ೧೯೨೩ ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ವರ್ಷಕ್ಕೆ ಎರಡು ಬಾರಿ ಸಮಾವೇಶಗೊಂಡು ಕಲಾಪ ನಡೆಸುತ್ತಿದ್ದರು. ಇದು ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರ ಠರಾವುಗಳ ಮಂಡನೆಯನ್ನು ಮಾಡುತ್ತಿತ್ತು. ಇದರಲ್ಲಿ ಹೆಚ್ಚು ಪ್ರತಿನಿಧಿಗಳನ್ನು ಜನರಿಂದಲೇ ಆಯ್ಕೆ ಮಾಡಲಾಗುತ್ತಿತ್ತು. ೧೯೦೭ ರಲ್ಲಿ 'ನ್ಯಾಯ ವಿಧಾಯಕ' ಸಭೆಯನ್ನು ಸ್ಥಾಪಿಸಿದರು. ವರ್ಷಕ್ಕೆ ಎರಡು ಬಾರಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿದ್ದ ಈ ಸಭೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಅಧಿಕಾರವನ್ನು ಹೊಂದಿತ್ತು. ಯಾವುದೇ ಕಾನೂನನ್ನು ಜಾರಿಗೊಳಿಸಲು ಈ ಸಭೆಯ ಅನುಮತಿ ಅಗತ್ಯವಾಗಿತ್ತು. ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು. ಇವರ ಕಾಲದಲ್ಲಿ ಗ್ರಾಮ ನೈರ್ಮಲೀಕರಣ, ವೈದ್ಯಕೀಯ ಸಹಾಯ, ವಿದ್ಯಾಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದ ಇವರು ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರಾರಂಭಿಸಿದರು. ರೈಲು ಮಾರ್ಗಗಳ ನಿರ್ಮಾಣ ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನೆ, ವಾಣಿವಿಲಾಸ ಸಾಗರ, | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕೃಷ್ಣರಾಜ ಸಾಗರ ಜಲಾಶಯಗಳ ನಿರ್ಮಾಣವಾದವು. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಉಚಿತ ಮತ್ತು ಕಡ್ಡಾಯಗೊಳಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯ, ಉಚಿತ ಆಸ್ಪತ್ರೆ, ಮೈಸೂರು ಬ್ಯಾಂಕ್, ಸಹಕಾರ ಸಂಘಗಳನ್ನು ಸ್ಥಾಪಿಸಲಾಯಿತು. ಅನೇಕ ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದರು. ಸಾಮಾಜಿಕ ಕಾನೂನುಗಳ ಹರಿಕಾರರಾದರು. ಇವೆಲ್ಲವುಗಳಿಂದ ಇವರ ಕಾಲದಲ್ಲಿ ಇಡೀ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಕಂಡಿದ್ದರಿಂದ ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಗುವಂತೆ ಮಾಡಿದರು.<br>**ಅಥವಾ**<br>ವಿಶ್ವೇಶ್ವರಯ್ಯನವರು ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. ಶಿಕ್ಷಣವು ಸಂಜೀವಿನಿ ಎಂಬುದನ್ನು ಅರಿತಿದ್ದ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ಜಾರಿಗೆ ತಂದರು. ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರೌಢ ಶಿಕ್ಷಣ ಶಾಲೆಗಳನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಮಾಡಿದ ಇವರು "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂಬುದನ್ನು ಮನಗಂಡು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಏಕೀಕೃತ ಕರ್ನಾಟಕದ ರಚನೆ ಮತ್ತು ಕನ್ನಡ ಭಾಷೆ ಹಾಗೂ ಸಾಹಿತ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಉಂಟಾಗಿದ್ದ ಒಲವನ್ನು ಮನಗಂಡು 'ಕನ್ನಡ ಸಾಹಿತ್ಯ ಪರಿಷತ್ತ'ನ್ನು ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ ಸಾಧನೆಯಾಗಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 42. | ಪಾಂಡವರನ್ನು ರಕ್ಷಿಸಲು ನಿರ್ಧರಿಸಿದ ಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>**ಅಥವಾ**<br>ಪಾಂಡವರು ತನ್ನ ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ಕವಿ ಕುಮಾರವ್ಯಾಸ ಹೇಗೆ ಚಿತ್ರಿಸಿದ್ದಾನೆ ?<br>***ಉತ್ತರ :***<br>ದ್ಯೂತದ ಪಣದಂತೆ ಹನ್ನೆರಡು ವರ್ಷ ವನವಾಸ ಒಂದು ವರ್ಷ ಅಜ್ಞಾತವಾಸವನ್ನು ಯಶಸ್ವಿಯಾಗಿ ಮುಗಿಸಿಬಂದ ಪಾಂಡವರು ತಮ್ಮ ಪಾಲಿನ ರಾಜ್ಯವನ್ನು ಕೇಳುತ್ತಾರೆ. ಅಜ್ಞಾತವಾಸವು ಪೂರ್ಣವಾಗಿಲ್ಲ ಎಂಬ ನೆಪವನ್ನೊಡ್ಡಿ ಕೌರವನು ರಾಜ್ಯ ನೀಡಲು ನಿರಾಕರಿಸುತ್ತಾನೆ. ಸಂಧಾನದ ಮುಖೇನ ರಾಜ್ಯವನ್ನು ಮರಳಿ ಪಡೆಯುವ ಪ್ರಯತ್ನದಲ್ಲಿ ಧರ್ಮರಾಯ ಕೃಷ್ಣನನ್ನು ಸಂಧಿಗಾಗಿ ಕಳುಹಿಸುತ್ತಾನೆ. ದುರ್ಯೋಧನನ ಹಠಮಾರಿತನದಿಂದ ಸಂಧಿ ವಿಫಲಗೊಂಡು ಯುದ್ಧವೇ ಸಿದ್ಧ ಎಂಬ ತೀರ್ಮಾನಕ್ಕೆ ಬರಲಾಗುತ್ತದೆ.<br>ಕೌರವನ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಇನ್ನೋರ್ವ ಬಲಶಾಲಿ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಶ್ರೀಕೃಷ್ಣನು ಕರ್ಣನನ್ನು ತನ್ನ ರಥದಲ್ಲಿ ತೊಡೆಗೆ ತೊಡೆ ತಾಕುವಂತೆ ಕುಳ್ಳಿರಿಸಿಕೊಂಡು ಕರ್ಣನಿಗೆ ಆತನ ಜನ್ಮ ರಹಸ್ಯವನ್ನು ಹೇಳುತ್ತಾನೆ. ಪಾಂಡವರು, ಕೌರವರು, ಯಾದವರೊಳಗೆ ಯಾವುದೇ ಭೇದವಿಲ್ಲ. ನೀನೇ ಈ ಭೂಮಿಗೆ ನಿಜವಾದ ಒಡೆಯನಾಗಬೇಕು. ಅದರ ಅರಿವು ನಿನ್ನ ಮನಸ್ಸಿಗೆ ತಿಳಿದಿಲ್ಲ. ಕುಂತಿಯು ದೂರ್ವಾಸ ಮುನಿಗಳಿಂದ ಪಡೆದ ಐದು ಮಂತ್ರಗಳಲ್ಲಿ ಮೊದಲಿಗೆ ಜನಿಸಿದವನು ನೀನು, ನಿನ್ನ ನಂತರ ಎರಡನೆಯವನು ಧರ್ಮರಾಯ, ಮೂರನೆಯದಾಗಿ ಭೀಮ, ನಾಲ್ಕನೆಯದಾಗಿ ಅರ್ಜುನ ನಂತರ ಮಾದ್ರಿಗೆ ನಕುಲ-ಸಹದೇವರು ಜನಿಸಿದರು. ಪಾಂಡವರಲ್ಲಿ ನೀನೆ ಹಿರಿಯವನು. ನೀನು ನನ್ನ ಮಾತನ್ನು ಒಪ್ಪುವುದಾದರೆ ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ. ಪಾಂಡವರು ಕೌರವರು ನಿನ್ನ ಸೇವೆಯನ್ನು ಮಾಡಲು ಒಪ್ಪಿಕೊಳ್ಳುವರು. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅವರ ಕೈಯಲ್ಲಿ ಸೇವೆ ಮಾಡಿಸಿಕೊಳ್ಳುವುದು ಬಿಟ್ಟು ದುರ್ಯೋಧನನ ಬಾಯಿ ಎಂಜಲಿಗೆ ಕೈಚಾಚುವುದು ಸರಿಯೇನು ಎಂದು ಹೇಳುತ್ತಾನೆ. ನಿನ್ನ ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡುತನಯರು, ಎದುರುಗಡೆ ಮಾದ್ರ, ಮಾಗಧ ಯಾದವಾದಿಗಳ ನಡುವೆ ವೈಭವದ ಜೀವನ ಮಾಡುವುದನ್ನು ಬಿಟ್ಟು ದುರ್ಯೋಧನನ ಬಳಿ ಜೀಯ ಹಸಾದವೆಂದು ಕೇಳುವುದು ಕಷ್ಟವಾಗುವುದಿಲ್ಲವೇ ಎಂದು ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡುವನು. | |
| | **ಅಥವಾ** | |
| | ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದ ಬದುಕು ಅಪೇಕ್ಷಣೀಯ. ಅದು ಸಾಧ್ಯವಾಗದೆ ಮತ್ಸರ, ಛಲ ಪ್ರಧಾನವಾದರೆ ಸಂಘರ್ಷ ಅನಿವಾರ್ಯವೆನಿಸುತ್ತದೆ. ಒಬ್ಬರನ್ನೊಬ್ಬರು ನಾಶ ಮಾಡುವವರೆಗೂ ಅದು ಬೆಳೆಯುತ್ತದೆ. ಶತ್ರುವಿನೊಂದಿಗೆ ಸಮರಕ್ಕಿಳಿದು ಕಾದಾಡುವ ಮುನ್ನ ಶತ್ರುಬಲದ ವಿವಿಧ ಆಯಾಮಗಳನ್ನು ಶಮನಗೊಳಿಸಿದಾಗ ಗೆಲುವು ಸಾಧ್ಯ ಎಂಬುದು ರಾಜತಂತ್ರ. ಧರ್ಮ ಪಾಂಡವರ ಪರವಿದ್ದುದರಿಂದ ಶ್ರೀಕೃಷ್ಣ ಕೌರವರ ಪಕ್ಷದ ವೀರ ಕರ್ಣನಿಂದ ತನ್ನವರಿಗೆ ಆತನಿಂದ ಅಪಾಯವಾಗದಂತೆ ಮಾಡಲು ಜನ್ಮರಹಸ್ಯವನ್ನು ಹೇಳುತ್ತಾನೆ. ಪಾಂಡವರು ತನ್ನ ಸಹೋದರರು ಎಂಬ ತಿಳಿದಾಗ ಕರ್ಣನ ಮನಸ್ಸಿನಲ್ಲಿ ನೋವು ಸಂಕಟವಾಗುತ್ತದೆ. ಗಂಟಲಿನ ನರಗಳು ಬಿಗಿಯುತ್ತವೆ. ಕಣ್ಣಿನಲ್ಲಿ ನೀರು ಸುರಿಯುತ್ತದೆ. ಅವನು ಬಹಳವಾಗಿ ನೊಂದುಕೊಂಡು ಕೌರವೇಂದ್ರನಿಗೆ ಕೇಡಾಯಿತು ಎಂದುಕೊಳ್ಳುತ್ತಾನೆ. ಹರಿಯ ವೈರತ್ವ ಹೊಗೆದೋರದೆ ಸುಡುವುದು. ತನ್ನ ಜನ್ಮರಹಸ್ಯವನ್ನು ಹೇಳಿ ಕೃಷ್ಣನು ಕೌರವೇಂದ್ರನನ್ನು ಕೊಂದನು ಎನ್ನುವನು. ಕರ್ಣನು ಏನೂ ಮಾತನಾಡದೆ ಸುಮ್ಮನಿದ್ದಾಗ ಕೃಷ್ಣನು ನಿನಗೆ ಕೌರವರ, ಪಾಂಡವರ ಕೈಯಲ್ಲಿ ಸೇವೆ ಮಾಡಿಸಿಕೊಳ್ಳಲು ಇಷ್ಟವಿಲ್ಲವೇ ಎಂದು ಕೇಳಿದಾಗ ಕರ್ಣನು ಕೃಷ್ಣನಿಗೆ ಈ ಭೂಮಿಯ ಸಿರಿಗೆ ಸೋಲುವವನಲ್ಲ. ಕೌರವರು ಪಾಂಡವರಿಂದ ಸೇವೆ ಮಾಡಿಸಿಕೊಳ್ಳಲು | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಇಷ್ಟವಿಲ್ಲ. ನನ್ನನ್ನು ಕಾಪಾಡಿದ ಒಡೆಯನಿಗೆ ವೈರಿಗಳ ತಲೆಯನ್ನು ಕತ್ತರಿಸಿ ತಂದೊಪ್ಪಿಸುವ ಆವೇಶದಲ್ಲಿದ್ದ ಸಂದರ್ಭದಲ್ಲಿ ನನ್ನ ಜನ್ಮರಹಸ್ಯ ತಿಳಿಸಿ ದುರ್ಯೋಧನನನ್ನು ಕೊಂದೆ ನೀನು ಎಂದು ಹೇಳುವನು. ನನಗೆ ವೀರ ಯೋಧನಾದ ದುರ್ಯೋಧನನೇ ಒಡೆಯ, ಆತನ ವೈರಿಗಳೇ ನನ್ನ ವೈರಿಗಳು. ಆತನ ಹೊಗಳಿಕೆಯೇ ನನ್ನ ಹೊಗಳಿಕೆ. ನಾಳೆ ನಡೆಯುವ ಸಮರದಲ್ಲಿ ಪಾಂಡವರಲ್ಲಿ ನನ್ನ ಭುಜಬಲ ಪರಾಕ್ರಮವನ್ನು ತೋರಿಸಿ ಮೃತ್ಯುದೇವತೆಗೆ ಔತಣಕೂಟವನ್ನು ಏರ್ಪಡಿಸುತ್ತೇನೆ. ಕೌರವನ ಋಣ ತೀರಿಸುವ ಸಲುವಾಗಿ ನನ್ನ ಪ್ರಾಣವನ್ನು ನೀಡುತ್ತೇನೆ. ಆದರೆ ನಿನ್ನವರಾದ ಪಾಂಡವರಿಗೆ ಯಾವುದೇ ತೊಂದರೆಯಾಗದಂತೆ ಮಾಡುತ್ತೇನೆ ಎಂದು ಕರ್ಣ ಕೃಷ್ಣನಿಗೆ ಹೇಳುತ್ತಾನೆ. ಇಲ್ಲಿ ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣನ ಸಂಕಟ, ನೋವು ಪ್ರಲೋಭನೆಗೆ ಒಳಗಾಗದೆ ಅಸಹಾಯಕನಾದ ಕರ್ಣನ ಸ್ಥಿತಿಯನ್ನು ಬಹು ಹೃದಯವಿದ್ರಾವಕವಾಗುವಂತೆ ಕವಿ ಕುಮಾರವ್ಯಾಸ ಚಿತ್ರಿಸಿದ್ದಾನೆ. ಸಾಮಾನ್ಯನಿಗೆ ತನ್ನ ಜನ್ಮರಹಸ್ಯವನ್ನು ತಿಳಿದಾಗ ಆಗುವ ಸಂತೋಷ ಕರ್ಣನಿಗೆ ಆಗಲಿಲ್ಲ. ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣ ಪ್ರಲೋಭನೆಗೆ ಒಳಗಾಗದ ಅಸಹಾಯಕನಾದ ಸ್ಥಿತಿಯಲ್ಲಿ ನೋವು ಸಂಕಟದಿಂದ ಬಳಲುವ ಕರ್ಣನ ವ್ಯಕ್ತಿತ್ವದ ಹಿರಿಮೆ ಗರಿಮೆ ಇಲ್ಲಿ ವ್ಯಕ್ತಗೊಂಡಿದೆ. | |
| **XIII.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :** | **1 × 4 = 4**<br>**( 2 + 2 )** |
| 43. | ಶ್ರೀರಂಗಪಟ್ಟಣದಿಂದ ಮೂರು ಕಿ.ಮೀ. ದೂರದಲ್ಲಿ ರಂಗನತಿಟ್ಟು ಪಕ್ಷಿಧಾಮವಿದೆ. ಕಾವೇರಿ ನದಿ ಕವಲಾಗಿ ಅಲ್ಲಲ್ಲಿ ದ್ವೀಪಗಳು ಏರ್ಪಟ್ಟಿವೆ. ದೇವರಾಜ, ರಂಗನತಿಟ್ಟು, ಗೆಂಡೆಹೊಸಹಳ್ಳಿ ಎಂಬಿವು ಮುಖ್ಯ ನಡುಗಡ್ಡೆಗಳು. ಇವುಗಳಲ್ಲಿ ರಂಗನತಿಟ್ಟು ವಿಸ್ತಾರವಾಗಿದೆ. ಸುಪ್ರಸಿದ್ಧವಾಗಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಂಗನತಿಟ್ಟು ಪಕ್ಷಿಗಳಿಗೆ ಉತ್ತಮ ಪರಿಸರವನ್ನು ಒದಗಿಸುತ್ತದೆ. ಕಾವೇರಿ ನದಿ ಈ ಪ್ರದೇಶದಲ್ಲಿ ಆಳವಾಗಿದ್ದು, ಮಳೆಗಾಲದಲ್ಲಿ ತುಂಬಿಹರಿಯುತ್ತದೆ. ದಂಡೆಯುದ್ದಕ್ಕೂ ಹಸಿರು ಗಿಡಮರಗಳು, ಸುತ್ತಲೂ ಹೊಲಗದ್ದೆಗಳೂ; ಇಲ್ಲೆಲ್ಲ ಪಕ್ಷಿಗಳ ಆಹಾರವಾದ ಕೀಟ, ಎರೆಹುಳು, ನಳ್ಳಿ, ಸಿಂಪುಹುಳು, ಕಪ್ಪೆ, ಮೀನುಗಳು ಹೇರಳವಾಗಿ ಸಿಗುತ್ತವೆ. ನದಿ ಆಳವಾಗಿರುವ ಕಾರಣ ಜನಸಂಚಾರವೂ ವಿರಳವಾಗಿರುವುದರಿಂದ ಪಕ್ಷಿಗಳಿಗೆ ನೈಸರ್ಗಿಕ ರಕ್ಷಣೆಯಿದೆ. ಆದುದರಿಂದ ಅವು ಸಾವಿರ ಸಾವಿರ ಸಂಖ್ಯೆಯಲ್ಲಿ ಇಲ್ಲಿ ನೆರೆಯುತ್ತವೆ.<br>ಇಲ್ಲಿ ಹಲವು ಹತ್ತು ಬಗೆಯ ಬಣ್ಣದ, ಆಕಾರದ ಗಾತ್ರದ ಪಕ್ಷಿಗಳನ್ನು ಕಾಣಬಹುದು. ಹಿಮ ಬಿಳುಪಿನ ಬಣ್ಣದ ತೆಳ್ಳನೆಯ ಕೊರಳಿನ ಬೆಳ್ಳಕ್ಕಿಗಳು; ಬಂಗಾರ ಬಣ್ಣದ, ಮುಖಮಲ್ಲಿನಂತಹ ನಯವಾದ ನೆತ್ತಿ ಮತ್ತು ಕೊರಳುಳ್ಳ ಬೂಸಹಕ್ಕಿಗಳು; ಬಾಗಿರುವ ಕೊಕ್ಕಿನ ಕೆಂಗಲ್ ಬಾತುಗಳು; ಉದ್ದವಾದ ಕೊಕ್ಕಿನ ಕರಿತಲೆ ಹಕ್ಕಿಗಳು; ಸಣ್ಣ ದೊಡ್ಡ ಗಾತ್ರದ ಬಗೆಬಗೆಯ ಕೊಕ್ಕರೆಗಳು; ಕ್ರೌಂಚ ಪಕ್ಷಿಗಳು; ಬಕ ಪಕ್ಷಿಗಳು; ಹಾವಿನಂತಹ ಕತ್ತಿನ ಕಪ್ಪು ಬಣ್ಣದ ನೀರ ಕೋಳಿಗಳು; ಮಿಂಚುಳ್ಳಿ ಹಕ್ಕಿಗಳು; ಕಡಲ ಹಕ್ಕಿಗಳು; ಬಾತುಕೋಳಿಗಳು ಮೊದಲಾದವು ಸಾವಿರಾರು ಸಂಖ್ಯೆಯಲ್ಲಿ ದಂಡೆಯುದ್ದಕ್ಕೂ ಸೇರುತ್ತವೆ.<br>ರಂಗನತಿಟ್ಟು ದ್ವೀಪದ ದಂಡೆಯುದ್ದಕ್ಕೂ ದೋಣಿಯಲ್ಲಿ ಪಕ್ಷಿಗಳ ನೆಮ್ಮದಿಗೆ ಭಂಗತಾರದೆ, ನೋಡುತ್ತಾ ಸಾಗಬಹುದು ಅಥವಾ ನದಿಯ ದಂಡೆಯುದ್ದಕ್ಕೂ ಮಾಡಿರುವ ದಾರಿಯಲ್ಲಿ ನಡೆದು ಹೋಗುತ್ತಾ ದೃಶ್ಯವನ್ನು ಸವಿಯಬಹುದು. ನಿಸರ್ಗವನ್ನೂ, ಪಕ್ಷಿಗಳನ್ನೂ ಪ್ರೀತಿಸುವವರಿಗೆ, ಆರಾಧಿಸುವವರಿಗೆ ಇದು ಪಕ್ಷಿಕಾಶಿಯಾಗಿದೆ.<br>***ಪ್ರಶ್ನೆಗಳು:***<br>ಅ) ರಂಗನತಿಟ್ಟು ಪಕ್ಷಿಧಾಮಕ್ಕೆ ಯಾವ ಯಾವ ಬಗೆಯ ಹಕ್ಕಿಗಳು ಬರುತ್ತವೆ ?<br>ಬ) ರಂಗನತಿಟ್ಟು ಪಕ್ಷಿಗಳನ್ನು ಆಕರ್ಷಿಸಲು ಕಾರಣವೇನು ? | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ಉತ್ತರ :* | |
| | ಅ) ರಂಗನತಿಟ್ಟು ಪಕ್ಷಿಧಾಮದಲ್ಲಿ ಹಲವು ಬಗೆಯ ಬಣ್ಣದ, ಆಕಾರದ ಗಾತ್ರದ ಪಕ್ಷಿಗಳನ್ನು ಕಾಣಬಹುದು. ಹಿಮ ಬಿಳುಪಿನ ಬಣ್ಣದ ತೆಳ್ಳನೆಯ ಕೊರಳಿನ ಬೆಳ್ಳಕ್ಕಿಗಳು, ಬಂಗಾರ ಬಣ್ಣದ, ಮುಖಮಲ್ಲಿನಂತಹ ನಯವಾದ ನೆತ್ತಿ ಮತ್ತು ಕೊರಳುಳ್ಳ ಬೂಸಹಕ್ಕಿಗಳು, ಬಾಗಿರುವ ಕೊಕ್ಕಿನ ಕೆಂಗಲ್ ಬಾತುಗಳು, ಉದ್ದವಾದ ಕೊಕ್ಕಿನ ಕರಿತಲೆ ಹಕ್ಕಿಗಳು, ಕೊಕ್ಕರೆಗಳು, ಕ್ರೌಂಚ ಪಕ್ಷಿಗಳು, ಬಕ ಪಕ್ಷಿಗಳು, ನೀರ ಕೋಳಿಗಳು, ಮಿಂಚುಳ್ಳಿ ಹಕ್ಕಿಗಳು, ಕಡಲ ಹಕ್ಕಿಗಳು, ಬಾತುಕೋಳಿಗಳು ಹೀಗೆ ನಾನಾ ಬಗೆಯ ಪಕ್ಷಿಗಳು ರಂಗನತಿಟ್ಟು ಪಕ್ಷಿಧಾಮಕ್ಕೆ ಬರುತ್ತವೆ. | |
| | ಬ) ರಂಗನತಿಟ್ಟು ಪಕ್ಷಿಗಳಿಗೆ ಉತ್ತಮ ಪರಿಸರವನ್ನು ಒದಗಿಸುತ್ತದೆ. ಕಾವೇರಿ ನದಿ ಈ ಪ್ರದೇಶದಲ್ಲಿ ಆಳವಾಗಿದ್ದು, ಮಳೆಗಾಲದಲ್ಲಿ ತುಂಬಿಹರಿಯುತ್ತದೆ. ದಂಡೆಯುದ್ದಕ್ಕೂ ಹಸಿರು ಗಿಡಮರಗಳು, ಸುತ್ತಲೂ ಹೊಲಗದ್ದೆಗಳೂ, ಪಕ್ಷಿಗಳಿಗೆ ಆಹಾರವಾದ ಕೀಟ, ಎರೆಹುಳು, ನಳ್ಳಿ, ಸಿಂಪುಹುಳು, ಕಪ್ಪೆ, ಮೀನುಗಳು ಹೇರಳವಾಗಿ ಸಿಗುತ್ತವೆ. ನದಿ ಆಳವಾಗಿರುವುದರಿಂದ ಜನಸಂಚಾರ ವಿರಳವಾಗಿದೆ. ಪಕ್ಷಿಗಳಿಗೆ ನೈಸರ್ಗಿಕ ರಕ್ಷಣೆಯಿದೆ. ಈ ಎಲ್ಲ ಅಂಶಗಳಿಂದಾಗಿ ರಂಗನತಿಟ್ಟು ಪಕ್ಷಿಗಳನ್ನು ಆಕರ್ಷಿಸುತ್ತದೆ. | |
| **XIV.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 44. | ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯ 'ವಿದ್ಯಾಶಂಕರ' ಎಂದು ಭಾವಿಸಿಕೊಂಡು, ಬಡಾವಣೆಯಲ್ಲಿ 'ಹದಗೆಟ್ಟಿರುವ ಚರಂಡಿ ವ್ಯವಸ್ಥೆ'ಯನ್ನು ಸರಿಪಡಿಸುವಂತೆ ಕೋರಿ ನಗರಸಭೆಯ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಕಲ್ಬುರ್ಗಿಯ ಸರ್ಕಾರಿ ಪ್ರೌಢಶಾಲೆಯ 'ಗಂಗಾಶ್ರೀ' ಎಂದು ಭಾವಿಸಿಕೊಂಡು, ವಾರ್ಷಿಕ ಪರೀಕ್ಷಾ ಸಿದ್ಧತೆಯನ್ನು ಕುರಿತು ಗದಗದ ಆದರ್ಶ ನಗರದಲ್ಲಿ ವಾಸವಾಗಿರುವ 'ಶ್ರೀನಿವಾಸ' ಎಂಬ ಹೆಸರಿನ ತಂದೆಯವರಿಗೆ ಪತ್ರವನ್ನು ಬರೆಯಿರಿ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ತಂದೆಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| **XV.** | **ಪ್ರಬಂಧ ಬರೆವಣಿಗೆ :** | **1 × 5 = 5** |
| 45. | ವಿದ್ಯಾರ್ಥಿಗಳ ಜ್ಞಾನಾರ್ಜನೆಯಲ್ಲಿ ಗ್ರಂಥಾಲಯಗಳ ಮಹತ್ವ. | |
| | **ಅಥವಾ** | |
| | ಭಾರತದ ವೈಜ್ಞಾನಿಕ ಪ್ರಗತಿಯ ದ್ಯೋತಕ ಚಂದ್ರಯಾನ-3. | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |